ಸಂದರ್ಶನ: ಹೇಮಾ ಎಸ್

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್

ಲೇಖಕಿ ಎಚ್.ಎಸ್. ಶ್ರೀಮತಿ
ಅವರೊಂದಿಗೆ ಸಂವಾದ

# ಸ್ತ್ರೀವಾದ ಕಣ್ಕಟ್ಟುಗಳ ಕಳಚಿಕೊಳ್ಳುವ ಹಾದಿಯಲ್ಲಿ

'ಮೇಡಂ, ಅಡುಗೆ ಮನೆಯಲ್ಲಿ ನಿಂತು ನಿಮ್ಮ 'ಗೌರಿದುಃಖ' ಓದ್ತಾ ಒಲೆ ಮತ್ತು ಪುಸ್ತಕ ಎರಡನ್ನೂ ಬ್ಯಾಲೆನ್ಸ್ ಮಾಡ್ತಿದಿನಿ' ಎಂದು ಎಚ್.ಎಸ್. ಶ್ರೀಮತಿ ಅವರಿಗೆ ಫೋನ್ ಮಾಡಿದಾಗ ಹೇಳಿದೆ. 'ಅಡುಗೆ ಮತ್ತು ಪುಸ್ತಕ ಬ್ಯಾಲೆನ್ಸ್ ಮಾಡ್ತಾ ಖುಷಿ ಪಡಿ. ಇದು ಸಣ್ಣ ಸಾಧನೆ ಅಲ್ಲ, ಎಂಜಾಯ್' ಎಂದು ಅವರು ಪ್ರತಿಕ್ರಿಯಿಸಿದ್ದರು. ಇದು ನನ್ನ ಮತ್ತು ಶ್ರೀಮತಿ ಅವರೊಂದಿಗಿನ ಫೋನ್ ಮಾತುಕತೆಯ ಆರಂಭವಾಗಿತ್ತು. ಸಂದರ್ಶನಕ್ಕಾಗಿ ಅವರ ಒಪ್ಪಿಗೆ ಪಡೆದು, ಅವರ ಎಲ್ಲ ಬರಹಗಳ ಬೆನ್ನುಹತ್ತಿ ಮತ್ತೊಮ್ಮೆ ಓದಲು ಶುರುಮಾಡಿದಾಗ, 'ನಾನು ಬರವಣಿಗೆ ಶುರುಮಾಡಿದ್ದೇ ನನ್ನ ಐವತ್ತನೆಯ ವಯಸ್ಸಿನಲ್ಲಿ' ಎಂದು ಅವರು ಹೇಳಿದ್ದು ನಿಜವೋ ಸುಳ್ಳೋ ಎನ್ನುವ ಅನುಮಾನ ಮೂಡಿತು. ಆರಂಭ ತಡವಾದರೂ ಸ್ತ್ರೀವಾದದ ಕುರಿತಾದ ಬಹಳ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುತ್ತಿರುವುದರ ಜೊತೆಗೆ ತಮ್ಮ

